**Cell :** 94808 38957
**e-mail :**de@uahs.edu.in

# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

**KELADI SHIVAPPA NAYAKA UNIVERSITY OF AGRICULTURAL AND HORTICULTURAL SCIENCES, SHIVAMOGGA**

**Main Campus : Iruvakki, Sagara Taluk, Shivamogga District, Karnataka**

ಡಾ. ಜಿ. ಕೆ. ಗಿರಿಜೇಶ್,
M.Sc(Agri),Ph.D
ವಿಸ್ತರಣಾ ನಿರ್ದೇಶಕರು

ವಿಸ್ತರಣಾ ನಿರ್ದೇಶನಾಲಯ
ಶರಾವತಿ ಆಡಳಿತ ಕಟ್ಟಡ, ಮೊದನಲೇ ಮಹಡಿ
ಇರುವಕ್ಕಿ, ಆನಂದಪುರ-577412

ಸಂಖ್ಯೆ.ಕೆ.ಶಿ.ನಾ.ಕೃ.ತೋ.ವಿ.ವಿ./ವಿ.ನಿ/2025-2026/ ದಿನಾಂಕ:16-10-2025

## ಪತ್ರಿಕಾ ಪ್ರಕಟಣೆ ಕೃಪೆಗಾಗಿ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗವು, ಕೃಷಿ ಮತ್ತು ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ದಿನಾಂಕ: 07-11-2025 ರಿಂದ 10-11-2025 ರವರೆಗೆ ನಾಲ್ಕು ದಿನಗಳ ಕೃಷಿ-ತೋಟಗಾರಿಕೆ ಮೇಳವನ್ನು ಹಮ್ಮಿಕೊಂಡಿದೆ. ಈ ವರ್ಷದ **ಕೃಷಿ-ತೋಟಗಾರಿಕೆ ಮೇಳವನ್ನು "ಸಹಕಾರ ಕೃಷಿಯಿಂದ ಸುಸ್ಥಿರ ಕೃಷಿ"** ಎಂಬ ಧ್ಯೇಯ ವಾಕ್ಯದೊಂದಿಗೆ ಕೃಷಿ ಮಹಾವಿದ್ಯಾಲಯ ನವಿಲೆ, ಶಿವಮೊಗ್ಗ ಆವರಣದಲ್ಲಿ ಆಯೋಜಿಸಲಾಗುವುದು. ಆಯಾ ಪ್ರದೇಶದ ಕೃಷಿ, ಹವಮಾನ, ಬೆಳೆ ಪರಿಸರಕ್ಕನುಗುಣವಾಗಿ, ಕೃಷಿ, ತೋಟಗಾರಿಕೆ, ಅರಣ್ಯ, ಪಶು ವಿಜ್ಞಾನ, ಮೀನುಗಾರಿಕೆ, ಮೌಲ್ಯವರ್ಧನೆ, ಕೌಶಲ್ಯಾಭಿವೃದ್ಧಿ ಮುಂತಾದ ವಿಷಯಗಳಲ್ಲಿ ಆದಂತಹ ಆವಿಷ್ಕಾರಗಳನ್ನು ಪರಿಚಯಿಸುವುದರ ಜೊತೆಯಲ್ಲಿ ಸರ್ಕಾರಗಳ ವಿವಿಧ ಯೋಜನೆಗಳನ್ನು ರೈತರಿಗೆ ಹಾಗೂ ಗ್ರಾಮ ಸಮುದಾಯಕ್ಕೆ ಪರಿಚಯಿಸುವುದು ಈ ಮೇಳದ ಉದ್ದೇಶ.

2025ರ ಮೇಳದ ಪ್ರಮುಖ ವಿಶೇಷತೆಗಳು ಎಂದರೆ

- ತಂತ್ರಜ್ಞಾನ ಉದ್ಯಾನವನ
- ಸಮಗ್ರ ಕೃಷಿ ಪದ್ಧತಿ
- ಪುಷ್ಪ ಕೃಷಿ ಮತ್ತು ತಾರಸಿ ತೋಟ
- ಜೇನು ವನ ಮತ್ತು ಕೀಟ ಪ್ರಪಂಚ
- ಪರಿಸರ ಕೃಷಿ ಪ್ರವಾಸೋದ್ಯಮ
- ಸಿರಿಧಾನ್ಯಗಳ ಮೌಲ್ಯವರ್ಧನೆ ಮತ್ತು ತಾಂತ್ರಿಕತೆಗಳು
- ಗೋಡಂಬಿ ಬೆಳೆ ಪ್ರಾತ್ಯಕ್ಷಿಕೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ
- ಸಾವಯವ ಕೃಷಿ
- ಪಶುಪಾಲನೆ
- ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ
- ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು
- ಕೃಷಿ ಪರಿಕರ ಮತ್ತು ಯಂತ್ರೋಪಕರಣಗಳ ಪ್ರದರ್ಶನ

ಈ ಮೇಳದಲ್ಲಿ 400 ಕ್ಕೂ ಹೆಚ್ಚು ಬೀಜ, ಸಸಿ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳು ಇರುತ್ತವೆ. ಜೊತೆಗೆ ರೈತ ಸಮಾಲೋಚನೆ, ರೈತರೊಡನೆ ಸಂವಾದ ಮತ್ತು ತಾಂತ್ರಿಕ ಸಮಾವೇಶಗಳನ್ನು ಕೂಡ ನಡೆಸಲಾಗುವುದು.

ರೈತ ಬಾಂಧವರು ಮೇಳದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯುವುದರೊಂದಿಗೆ ವಿವಿಧ ಮಾಹಿತಿಯನ್ನ ಪಡೆದುಕೊಂಡು ಮೇಳದ ಯಶಸ್ಸಿಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

**ಆಸಕ್ತರು ಮಳಿಗೆಗಳನ್ನು ಕಾಯ್ದಿರಿಸಲು ಈ ಕೆಳಗಿನವರನ್ನು ಸಂಪರ್ಕಿಸಬಹುದು.**

ಡಾ. ಬಿ.ಸಿ. ಹನುಮಂತಸ್ವಾಮಿ, ಸಹ ವಿಸ್ತರಣಾ ನಿರ್ದೇಶಕರು, ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಮೊಬೈಲ್ - 9480838217
ಡಾ. ಕಲ್ಲೇಶ್ವರ ಸ್ವಾಮಿ ಸಿ.ಎಂ. ಪ್ರಾಧ್ಯಾಪಕರು (ಕೀಟಶಾಸ್ತ್ರ), ಕೃಷಿ ಮಹಾವಿದ್ಯಾಲಯ, ನವಿಲೆ, ಶಿವಮೊಗ್ಗ ಮೊಬೈಲ್-9449537578
ಡಾ. ಗಿರೀಶ್ ಆರ್. ವಿಜ್ಞಾನಿ (ಸಸ್ಯ ಸಂರಕ್ಷಣೆ), ಕೃಷಿ ವಿಜ್ಞಾನ ಕೇಂದ್ರ, ನವಿಲೆ, ಶಿವಮೊಗ್ಗ ಮೊಬೈಲ್-9739916660
ಡಾ. ನಾಗರಾಜ್ ಆರ್., ಹಿರಿಯ ತಾಂತ್ರಿಕ ಅಧಿಕಾರಿ, ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ ಮೊಬೈಲ್ - 9353493824

ವಿಸ್ತರಣಾ ನಿರ್ದೇಶಕರು

ವಿಸ್ತರಣಾ ನಿರ್ದೇಶಕರು
ಕೆ.ಶಿ.ನಾ.ಕೃ.ತೋ.ವಿ.ವಿ., ಇರುವಕ್ಕಿ.
ಶಿವಮೊಗ್ಗ-577 412